C.R.P.67

| Form No.4<br>(Criminal)<br>Deposition<br>Sheets<br>(R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 256/2019

**ಚಾಸಾ- 28 ಫ್ರಾ.ಸಾ- 14**

| | |
|---|---|
| **ಸಾಕ್ಷಿದಾರರ ಹೆಸರು** | **ಮಹೇಶ ಎ.ಎಸ್** |
| **ತಂದೆಯ ಹೆಸರು** | **ಎ.ಪಿ ಶಿವಶಂಕರಯ್ಯ** |
| **ವಯಸ್ಸು** | **66 ವರ್ಷಗಳು** |
| **ಉದ್ಯೋಗ** | **ನಿವೃತ್ತ ಎಕ್ಸಿಕ್ಯೂಟೀವ್ ಎಂಜಿನಿಯರ್** |
| **ವಾಸ** | **ಬೆಂಗಳೂರು** |

**ದಿನಾಂಕಃ 11.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನಾನು ಜೂನ್ 2016 ರಿಂದ ದಿಃ19.03.2020 ರವರಗೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ಆಗಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಮಂಡ್ಯ ಉಪ ವಿಭಾಗ, ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ31.08.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ವಾರ್ಡ್ ನಂ.13ರ ಸ್ವತ್ತಿನ ಸಂಖ್ಯೆ:13-2-134-70ಎ ರ ಸ್ಥಳಕ್ಕೆ ಭೇಟಿ ನೀಡಿ ಸದರಿ ಮನೆಯಲ್ಲಿ ಯಾರು ವಾಸವಿದ್ದಾರೆ ಎಂದು ಪರಿಶೀಲನೆ ಮಾಡಿ ವರದಿ ನೀಡುವಂತೆ ಕೋರಿಕೆಯನ್ನು ಸಲ್ಲಿಸಿದ್ದರು. ಸದರಿ ಕೋರಿಕೆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-30** ಎಂದು ಗುರುತಿಸಲಾಗಿದೆ. ಅದರಂತೆ ದಿಃ14.10.2019 ರಂದು ಸದರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಮನೆ ನಂ.381 ರಲ್ಲಿ ಯಾರು ವಾಸವಿದ್ದಾರೆಂದು ಅಕ್ಕಪಕ್ಕದವರನ್ನು ಕರೆಯಿಸಿ ವಿಚಾರಿಸಿದಾಗ ಪುಟ್ಟಮಾದಯ್ಯ ಬಿನ್ ಲೇಟ್ ಕಾಳಯ್ಯರವರು ಸದರಿ ಮನೆಯಲ್ಲಿ 50 ವರ್ಷಗಳ ಮೇಲ್ಪಟ್ಟು ವರ್ಷಗಳಿಂದ ವಾಸವಿದ್ದಾರೆ ಎಂದು ಸಾರ್ವಜನಿಕರು ಳಿಸಿದ್ದು ಸದರಿ ಸಾರ್ವಜನಿಕ ಸಮಕ್ಷಮ ಮಹಜರನ್ನು ಮಾಡಿರುತ್ತೇನೆ. ಸದರಿ ಮಹಜರಿನ ನಕಲನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-31** ಎಂದು

ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ-31(ಎ)** ಎಂದು ಗುರುತಿಸಲಾಗಿದೆ. (ದಾಖಲಾತಿ ನಕಲು ಆದ್ದರಿಂದ ನಿಶಾನೆಯಾಗಿ ಗುರುತಿಸಲು ಆರೋಪಿತರ ಪರ ವಕೀಲರು ತಕರಾರು ಮಾಡಿದ್ದು, ಸದರಿ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ). ಆ ಸಂದರ್ಭದಲ್ಲಿ ಪುಟ್ಟಮಾದಯ್ಯ ಮತ್ತು ಅವರ ಹೆಂಡತಿ ಜಯಮ್ಮರವರ ಆಧಾರ್ ಕಾರ್ಡಿನ ಪ್ರತಿ, ಚುನಾವಣಾ ಗುರುತಿನ ಚೀಟಿಯು ಮತ್ತು ಪಡಿತರಚೀಟಿಯ ನಕಲು ಪ್ರತಿಗಳನ್ನು ಪಡೆದು ಮಹಜರಿನೊಂದಿಗೆ ಲಗತ್ತಿಸಿ ನನ್ನ ಕವಚಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಕವಚ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-32** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ-32(ಎ)** ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:</u>**

1. ತನಿಖಾಧಿಕಾರಿಗಳು ನನಗೆ ನಿಪಿ-30ಕೋರಿಕೆಯನ್ನು ನೀಡಿದಾಗ ಅದರ ಜೊತೆಗೆ ಯಾವುದೇ ಸ್ವತ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ನೀಡಿರುವುದಿಲ್ಲ. ನಾನು ಮಹಜರ್ ತಯಾರಿಸಲು ಸ್ಥಳಕ್ಕೆ ಹೋದಾಗ ನಗರಸಬೆಯಿಂದ ಸದರಿ ಸ್ವತಿಗೆ ಸಂಬಂದಪಟ್ಟ ಯಾವುದೇ ದಾಖಲೆಯನ್ನು ಪಡೆದುಕೊಂಡು ಹೋಗಿರುವುದಿಲ್ಲ. ಮಹಜರ್ ತಯಾರಿಸುವ ಸಮಯದಲ್ಲಿ ಪುಟ್ಟಮಾದಯ್ಯ ಆಗಲೀ ಆತನ ಹೆಂಡತಿ ಜಯಮ್ಮ ಆಗಲೀ ಸದರಿ ಸ್ವತ್ತು ಅವರಿಗೆ ಸಂಬಂದಪಟ್ಟಿದ್ದು ಎಂದು ತೋರಿಸುವ ಯಾವುದೇ ದಾಖಲೆಗಳನ್ನು ನನಗೆ ನೀಡಿರುವುದಿಲ್ಲ, ನಾನು ಆಧಾರ್ ಕಾರ್ಡು, ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯ ಪ್ರತಿಗಳನ್ನು ಅವರಿಂದ ಪಡೆಯುವಾಗ ಸ್ವತ್ತಿಗೆ ಸಂಬಂದಪಟ್ಟಂತೆ ಇರುವ ಯಾವುದೇ ದಾಖಲೆಗಳನ್ನು ತೋರಿಸಬೇಕೆಂದು ನಾನು ಕೇಳಿರುವುದಿಲ್ಲ. ತನಿಖಾಧಿಕಾರಿಗಳಿಗೆ ನಿಪಿ-32 ಕವಚ ಪತ್ರದೊಂದಿಗೆ ದಾಖಲೆಗಳನ್ನು ಸಲ್ಲಿಸುವ ಪೂರ್ವದಲ್ಲಿ ನಗರಸಭೆಯಿಂದ ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ಯಾವುದೇ ದಾಖಲೆಯನ್ನು ಪಡೆದು ಪರಿಶೀಲನೆ ಮಡಿರುವುದಿಲ್ಲ.
2. ಸಾಮಾನ್ಯವಾಗಿ ಕೊಳಚೆ ನಿರ್ಮೂಲನ ಮಂಡಳಿಯಿಂದ ಯಾರಿಗಾದರೂ ಮನೆ ಕಟ್ಟಿಕೊಡಬೇಕಾದರೆ ಸದರಿ ಅರ್ಜಿದಾರರಿಗೆ ಯಾವುದೇ ಮನೆ ಇಲ್ಲ ಎಂದು ಕಂಡು ಬಂದ ನಂತರ ಅವರಿಗೆ ಮನೆ ಕಟ್ಟಿಕೊಡಬೇಕೆಂಬ ಸದುದ್ದೇಶ ಹೊಂದಿಕೊಂಡಿರುತ್ತದೆ.

ಮನೆ ನಂ.381 ಕ್ಕೆ ಸಂಬಂದಪಟ್ಟಂತೆ ಮಹಜರ್ ತಯಾರಿಸಿರುವುದಾಗ ಕವಚ ಪತ್ರದಲ್ಲಿ ನಮೂದಿಸಿದ್ದು ಇದಕ್ಕೆ ಪೂರಕವಾದ ಯಾವುದೇ ಪತ್ರ ವ್ಯವಹಾರ ನಡೆಸಿರುವುದಾಗಿ ನಮ್ಮ ಕಛೇರಿಯ ಕಡತದಲ್ಲಿ ಇರುವುದಿಲ್ಲ. ನಮ್ಮ ಇಲಾಖೆಗೆ ಶಶಿಧರ ಎನ್ನುವ ವ್ಯಕ್ತಿ ಸದರಿ ಸ್ವತ್ತು ತನಗೆ ಸೇರಿರುತ್ತದೆ ಎಂದು ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೊಳಚೆ ನಿರ್ಮೂಲನ ಮಂಡಳಿಯಿಂದ ಯಾರಿಗಾದರೂ ಮನೆ ಕಟ್ಟಿಕೊಡಬೇಕುವ ಎನ್ನುವ ಪೂರ್ವದಲ್ಲಿ ಅವರನ್ನು ತಾತ್ಕಾಲಿಕವಾಗಿ ಶೆಡ್ಡನ್ನು ಕಟಿಕೊಂಡು ಇರಲು ಹೇಳುತ್ತೇವೆ ಎಂದರೆ ಸರಿಯಲ್ಲ. ದಿಃ14.10.2019 ರಂದು ನಾನು ನಿಪಿ–31 ಮಹಜರ್ ತಯಾರಿಸಿರುತ್ತೇನೆ ಎನ್ನುವ ಸಮಯ ಪುಟ್ಟ ಮಾದಯ್ಯ ಸದರಿ ಸ್ಥಳದಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಿಂದ ಯಾವುದೇ ದಾಖಲೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ನಿಪಿ–31 ರಲ್ಲಿ ಸಾಕ್ಷಿಗಳಾಗಿ ತೋರಿಸಿರುವವರು ಯಾರು ಸದರಿ ಸ್ಥಳದ ಅಕ್ಕಪಕ್ಕದ ನಿವಾಸಿಗಳಲ್ಲ ಎಂದರೆ ಸರಿಯಲ್ಲ. ಅವರೆಲ್ಲರೂ ಪುಟ್ಟಮಾದಯ್ಯರವರ ಸಂಬಂದಿಕರು ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಒತ್ತಡಕ್ಕೆ ಒಳಗಾಗಿ ಪಿರ್ಯಾದಿಗೆ ಅನುಕೂಲವಾಗುವಂತೆ ಸುಳ್ಳು ಮಹಜರನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**